ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಸ್ವಚ್ಛ ಭಾರತ ಮಿಷನ್ (ಗ್ರಾಮೀಣ)
2ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-560 009.

**ಕಡತ ಸಂಖ್ಯೆ:** RDP/109/RDW&SD/SBM-G/HRD/2018 ದಿನಾಂಕ 04.01.2020

## ಪತ್ರಿಕಾ ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಜಿಲ್ಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರನ್ನು ನೇಮಿಸಿಕೊಳ್ಳಲು ಅರ್ಜಿ ಕರೆಯಲಾಗಿದೆ.

| ಕ್ರ. ಸಂ. | ಹುದ್ದೆಯ ವಿವರ ಮತ್ತು ಸಂಖ್ಯೆ | ವಿದ್ಯಾರ್ಹತೆ ಮತ್ತು ಅನುಭವ | ಮಾಸಿಕ ಸಂಭಾವನೆ |
|---|---|---|---|
| 1 | ಮಾನವ ಸಂಪನ್ಮೂಲ ಅಭಿವೃದ್ಧಿ (HRD) | M.S.W/ M.A/Post Graduate in Rural Development/ Social Science. From a recognized university only. | 22,000/- |
| 2 | ಮಾಹಿತಿ ಶಿಕ್ಷಣ ಹಾಗೂ ಸಂವಹನ (IEC) | M.S in Communication/ M.A in Journalism. From a recognized university only. | 22,000/- |
| 3 | ನೈರ್ಮಲ್ಯ ಹಾಗೂ ಶುಚಿತ್ವ (SH) | Graduate degree in Engineering/ Social Science/ Public health/ Diploma/ Degree in Rural Management or other relevant Field. From a recognized university only. | 22,000/- |
| 4 | ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ (SLWM) | BE-Environmental Engineering/BE Civil Engineering with Specialistion in Environmental Science. From a recognized university only. | 22,000/- |
| 5 | ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ- (MIS/ M&E) | M.C.A/M.A Economics / Statistics, M.Sc Computer Science/ BE Computer Science. From a recognized university only. | 22,000/- |

1) **ಗುತ್ತಿಗೆಯ ಅವಧಿ:** ಮೇಲಿನ ಹುದ್ದೆ ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಯಾಗಿದ್ದು, ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು ನಂತರ ಕಾಲಕಾಲಕ್ಕೆ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ನವೀಕರಿಸಲಾಗುವುದು.
2) **ವಯೋಮಾನ:** ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 45 ವರ್ಷಗಳು ಮೀರಿರಬಾರದು.
3) ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ತುಂಬಿ, ವಯಸ್ಸಿನ ದೃಢೀಕರಣ, ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥ್ಯಗಳು (ಏನಾದರು ಇದ್ದಲ್ಲಿ) ಜೊತೆಗೆ "ನಾನು ಈ ಹುದ್ದೆಗೆ ಯಾವ ರೀತಿ ಸೂಕ್ತನಾಗಿದ್ದೇನೆ" ಎಂಬುದರ ಬಗ್ಗೆ ಒಂದು ಪುಟದಲ್ಲಿ ಟಿಪ್ಪಣಿ ಬರೆದು ಅರ್ಜಿಯನ್ನು ಪೋಸ್ಟ್ / ಸ್ಪೀಡ್ ಪೋಸ್ಟ್ / ಕೊರಿಯರ್ ಮುಖಾಂತರ/ ನೇರವಾಗಿ **ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, 'ಇ' ಬ್ಲಾಕ್, ಕೆ.ಹೆಚ್.ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-560009 ಇವರಿಗೆ ಕಳುಹಿಸಬೇಕು. ಅರ್ಜಿಯ ಹಾರ್ಡ್‌ಪ್ರತಿಯನ್ನು ದಿನಾಂಕ 18.01.2020 ರ ಸಂಜೆ 5:30 ಗಂಟೆಯೊಳಗೆ ಸಲ್ಲಿಸಬೇಕು. ನಂತರ ಬಂದಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.** (**ಅರ್ಜಿಯ ನಮೂನೆಯು RDPR website**ನಲ್ಲಿ ಲಭ್ಯವಿರುತ್ತದೆ).
4) **ಸ್ನಾತಕೋತ್ತರ ಪದವಿಯನ್ನು ದೂರ ಶಿಕ್ಷಣ ಮುಖಾಂತರ ಪಡೆದಿದ್ದರೆ, ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
5) ಪ್ರತಿ ಹುದ್ದೆಗೆ ಕನಿಷ್ಠ 3-5 ವರ್ಷಗಳ ಅನುಭವ ಹಾಗೂ ನೀರು ಮತ್ತು ನೈರ್ಮಲ್ಯ/ ಪಂಚಾಯತ್ ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.

6) ಆಯ್ಕೆಯಾದ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕು.

7) ಕರಾರು ಒಪ್ಪಂದ ಮಾಡಿಕೊಂಡ ಅಭ್ಯರ್ಥಿಗೆ ಇಲಾಖೆಯಲ್ಲಿನ ಯಾವುದೇ ಹುದ್ದೆಗಳಲ್ಲಿ ವಿಲೀನಗೊಳ್ಳಲು / ಮುಂದುವರೆಯಲು ಯಾವುದೇ ಹಕ್ಕು ಇರುವುದಿಲ್ಲ.

8) ಕಿರುಪಟ್ಟಿ ಅಭ್ಯರ್ಥಿಗಳಿಗೆ (Shortlisted candidates) ಅವರುಗಳ ಇ-ಮೇಲ್/ ದೂರವಾಣಿ ಮುಖಾಂತರ ತಿಳಿಸಲಾಗುವುದು.

9) **ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನವನ್ನು ಆಯಾ ಜಿಲ್ಲಾ ಪಂಚಾಯಿತಿ ಕಛೇರಿಯಲ್ಲಿ ವಿಡಿಯೋ ಸಂವಾದದ ಮೂಲಕ ನಡೆಸಲಿದ್ದು, ನಿಗಧಿಪಡಿಸಿದ ದಿನಾಂಕ ಮತ್ತು ವೇಳೆಯಲ್ಲಿ ಹಾಜರಾಗುವುದು.**

10) ನೇಮಕಾತಿಯನ್ನು ಪೂರ್ಣವಾಗಿ ಮತ್ತು ಭಾಗಶಃ ರದ್ದು ಮಾಡುವ/ ಮುಂದೂಡುವ ಹಕ್ಕನ್ನು ಇಲಾಖೆಯು ಹೊಂದಿರುತ್ತದೆ.

11) ಜಿಲ್ಲಾವಾರು ಖಾಲಿಯಿರುವ ಹುದ್ದೆಗಳ ಸಂಖ್ಯೆಯು ಹೆಚ್ಚಳ ಹಾಗೂ ಕಡಿಮೆಯಾಗಬಹುದು.

12) ಹುದ್ದೆಯು ಜಿಲ್ಲಾಮಟ್ಟದ ಹುದ್ದೆಯಾಗಿರುವುದರಿಂದ ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಆಯುಕ್ತರು
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

## ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ)
## ಜಿಲ್ಲಾವಾರು ಖಾಲಿ ಇರುವ ಸಮಾಲೋಚಕರ ತಾತ್ಕಾಲಿಕ ಹುದ್ದೆಗಳ ವಿವರ

| ಕ್ರ.ಸಂ | ಜಿಲ್ಲೆ | HRD | IEC | SH | MIS/ M&E | SLWM | Vacant Post |
|---|---|---|---|---|---|---|---|
| 1 | ಬೆಳಗಾಂ | | | | | 1 | 1 |
| 2 | ಬೆಂಗಳೂರು(ಗ್ರಾ) | | 1 | | | 1 | 2 |
| 3 | ಚಾಮರಾಜನಗರ | | | | 1 | | 1 |
| 4 | ಚಿಕ್ಕಬಳ್ಳಾಪುರ | | | 1 | 1 | | 2 |
| 5 | ಚಿಕ್ಕಮಗಳೂರು | 1 | | | | | 1 |
| 6 | ಚಿತ್ರದುರ್ಗ | | | | | 1 | 1 |
| 7 | ಹಾಸನ | 1 | 1 | | | | 2 |
| 8 | ಕೊಡಗು | | | | | 1 | 1 |
| 9 | ಕೋಲಾರ | | | | | 1 | 1 |
| 10 | ಕೊಪ್ಪಳ | | | | 1 | | 1 |
| 11 | ಮೈಸೂರು | 1 | | 1 | | | 2 |
| 12 | ರಾಮನಗರ | | | | | 1 | 1 |
| 13 | ಉತ್ತರ ಕನ್ನಡ | | 1 | | 1 | | 2 |
| 14 | ವಿಜಯಪುರ | | | | | 1 | 1 |
| ಒಟ್ಟು | | 3 | 3 | 2 | 4 | 7 | 19 |

ಆಯುಕ್ತರು
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ